ವರದಿಯಲ್ಲಿ ಮಾಡಿರುವ ಕೆಲವು ಶಿಫಾರಸ್ಸುಗಳು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಪರಿಣಾಮ ಬೀರುತ್ತವೆ. ರಾಜ್ಯ ಸರ್ಕಾರಿ ನೌಕರರ ಸಂಖ್ಯೆಯನ್ನು ಕಡಿತಗೊಳಿಸುವುದು, ಮರು ಹಂಚಿಕೆ ಮಾಡುವುದು, ಕೆಲವೊಂದು ಇಲಾಖೆಗಳನ್ನು ವಿಲೀನಗೊಳಿಸುವುದು, ವರ್ಗಾವಣೆಗಳ ಸಂಖ್ಯೆಯನ್ನು ಕಡಿಮೆ ಮಾಡುವುದು, ಇವು ಆಯೋಗದ ಮುಖ್ಯ ಶಿಫಾರಸ್ಸುಗಳು. ಆಡಳಿತ ಸುಧಾರಣಾ ಆಯೋಗದ ವರದಿಯನ್ನು ಸರ್ಕಾರವು ಪರಿಶೀಲಿಸುತ್ತಿದೆ.

2) ದಿನಾಂಕ: 20.05.1999ರ ಸರ್ಕಾರದ ಆದೇಶ ಸಂಖ್ಯೆ ಸಿ.ಆ.ಸು.ಇ. 07 ಈಕಾಆ 98ರಲ್ಲಿ ಈಗಾಗಲೇ 20142 ಹುದ್ದೆಗಳನ್ನು ರದ್ದುಗೊಳಿಸಲಾಗಿದೆ. ಇದಲ್ಲದೇ ವಿವಿಧ ಇಲಾಖೆಗಳಲ್ಲಿರುವ ಶೇ.80ರಷ್ಟು ಖಾಲಿ ಹುದ್ದೆಗಳನ್ನು ರದ್ದುಗೊಳಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ. ಅಲ್ಲದೇ ಆಡಳಿತ ಸುಧಾರಣಾ ಆಯೋಗದ ವರದಿಯನ್ನು ಜಾರಿಗೊಳಿಸಿದ ನಂತರ ಮತ್ತಷ್ಟು ಹುದ್ದೆಗಳು ರದ್ದಾಗುವ ಸಂಭವವಿದೆ.

ರಾಜ್ಯದಲ್ಲಿ ಐ.ಎ.ಎಸ್. ಅಧಿಕಾರಿಗಳ ಭ್ರಷ್ಟಾಚಾರ.

2422 (3404) ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದಲ್ಲಿ ಇತ್ತೀಚಿನ ವರ್ಷದಲ್ಲಿ ಐ.ಎ.ಎಸ್. ಅಧಿಕಾರಿಗಳಲ್ಲಿ ಭ್ರಷ್ಟಾಚಾರ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) 1999-2000, 2000-2001ರ ಸಾಲಿನಲ್ಲಿ ಎಷ್ಟು ಮಂದಿ ಐ.ಎ.ಎಸ್. ಅಧಿಕಾರಿಗಳ ಮೇಲೆ ಕ್ರಮ ಕೈಗೊಳಲಾಗಿದೆ.

ಇ) ಅಕ್ರಮ ಸಂಪತ್ತು ಹಾಗೂ ಆಪರ (ನಿಗದಿತ ಆದಾಯಕ್ಕಿಂತಲೂ ಹೆಚ್ಚು) ಸಂಪತ್ತು ಹೊಂದಿರತಕ್ಕ ಐ.ಪಿ.ಎಸ್. ಹಾಗೂ ಐ.ಎ.ಎಸ್. ಅಧಿಕಾರಿಗಳನ್ನು ಗುರುತಿಸಿ ಅವರ ಮೇಲೆ ಲೋಕಾಯುಕ್ತ ಮೋದಲಾದ ಇಲಾಖೆಗಳ ಮೂಲಕ ಸಮರ್ಪಣಾ ದಾಳಿಗಳನ್ನು ಮಾಡಲಾಗಿದೆಯೇ (ವಿವರಗಳನ್ನು ನೀಡುವುದು)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :—

ಅ) ಇಲ್ಲ

ಆ) 1

ಇ) ಕರ್ನಾಟಕ ಲೋಕಾಯುಕ್ತಕ್ಕೆ ಬಂದ ದೂರುಗಳನ್ನು ಪರಿಶೀಲಿಸಿದ ಲೋಕಾಯುಕ್ತವು ಅಕ್ರಮ ಸಂಪತ್ತು ಹೊಂದಿದ್ದಾರೆನ್ನಲಾದ ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳ ಮನೆ : ಕಛೇರಿಯ ಮೇಲೆ ತಪಾಸಣಾ ದಾಳಿಗಳನ್ನು ಮಾಡುತ್ತವೆ. 2000ನೇ

ಸಾಲಿನಲ್ಲಿ ಪ್ರೊ. ಐ.ಆರ್. ಪೆರುಮಾಳ್‌ರವರ ಮನೆಯ ಮೇಲೆ ಲೋಕಾಯುಕ್ತವು ದಾಳಿ ನಡೆಸಿದ ತನಿಖೆಯ ಅಂತಿಮ ವರದಿ ಸರ್ಕಾರಕ್ಕೆ ಇನ್ನು ಬರಬೇಕಾಗಿದೆ.

ರಾಜ್ಯದಲ್ಲಿ ತೆರಿಗೆ ಸುಧಾರಣಾ ಕ್ರಮಗಳು

2423(3405) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಈಗ ಇರುವ ತೆರಿಗೆ ಪದ್ಧತಿಯಲ್ಲಿ ವಾಣಿಜ್ಯೋದ್ಯಮಿಗಳಿಗೆ, ಉದ್ದಿಮೆದಾರರಿಗೆ, ಸಣ್ಣ ಕೈಗಾರಿಕೆಗಳನ್ನು ನಡೆಸುವವರಿಗೆ ಅನೇಕ ರೀತಿಯ ಕಿರುಕುಳಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಗ್ಗೆ ತೆರಿಗೆ ಸುಧಾರಣಾ ಆಯೋಗವು ನೀಡಿದ ವರದಿಯ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಇ) ಮುಂದಿನ ಆರ್ಥಿಕ ವರ್ಷದಲ್ಲಿ ತೆರಿಗೆ ವಿಧಿಸುವಲ್ಲಿ ಸರಳೀಕರಣ ಮಾಡುವ ಗುರಿಯನ್ನು ಸರ್ಕಾರ ಕಾರ್ಯಗತಗೊಳಿಸುವುದೇ; ಈ ಬಗ್ಗೆ ಸರ್ಕಾರದ ಪ್ರಯತ್ನಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :—

ಅ) ತೆರಿಗೆ ಪದ್ಧತಿಯಲ್ಲಿರುವ ಕೆಲವು ಅನಾನುಕೂಲತೆ ಬಗ್ಗೆ ವಾಣಿಜ್ಯೋದ್ಯಮಿಗಳಿಂದ ಬಂದ ಮನವಿಗಳನ್ನು ರಾಜಸ್ವ ಸಂಗ್ರಹಣೆ ಅಂಶವನ್ನು ಗಮನದಲ್ಲಿಟ್ಟುಕೊಂಡು ಕೆಲವು ಬದಲಾವಣೆಗಳನ್ನು ಆಗಿಂದ್ದಾಗ್ಗೆ ಮಾಡಲಾಗುತ್ತಾ ಬಂದಿದೆ.

ಆ) ತೆರಿಗೆ ಸುಧಾರಣಾ ಆಯೋಗವು ತನ್ನ ಮೊದಲನೆ ವರದಿಯಲ್ಲಿ ವಾಣಿಜ್ಯ ತೆರಿಗೆಗಳ ಸಾಮಾನ್ಯ ಸುಧಾರಣಾ ಕ್ರಮವಾಗಿ ಇನ್ನಿತರ ಶಿಫಾರಸ್ಸುಗಳೊಂದಿಗೆ ಮಾರಾಟ ತೆರಿಗೆ ದರಗಳ ಸಂಖ್ಯೆಗಳಲ್ಲಿ ಕಡಿತ, ಕರ ನಿರ್ಧರಣೆ ಕ್ರಮದ ಸರಳೀಕರಣ, ಕೆಲವು ತೆರಿಗೆ : ವಿನಾಯಿತಿಗಳನ್ನು ಮಾಪಸ್ಸು ಪಡೆಯುವ ಕ್ರಮ ಮತ್ತು ರಾಜ್ಯದ ಕೈಗಾರಿಕೆಗಳನ್ನು ಅಂತರ ರಾಜ್ಯ ಮತ್ತು ಅಂತರ ದೇಶಿಯ ಮಾರುಕಟ್ಟೆಗಳನ್ನು ಸ್ಪರ್ಧಾತ್ಮಕವಾಗಿರುವಂತೆ ಮಾಡಲು ಮೌಲ್ಯವರ್ಧಿತ ತೆರಿಗೆ ಪದ್ಧತಿಯನ್ನು ಜಾರಿಗೆ ತರಲು ಶಿಫಾರಸ್ಸು ಮಾಡಿರುತ್ತದೆ.

1) ಪ್ರಸಕ್ತ ಆಯವ್ಯಯ ಪತ್ರದಲ್ಲಿ ಕೆಲವು ಸರಕುಗಳ ದರಗಳನ್ನು ಪರಿಷ್ಕರಿಸಿ ಮಾರಾಟ ತೆರಿಗೆಗಳ ಸಂಖ್ಯೆಗಳಲ್ಲಿ ಕಡಿತ ಮಾಡಲಾಗಿದೆ.